ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91–80–2226 0017; (ಗೈಡ್ ವಿಭಾಗ) +91–80–2226 7470

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ: ಎಸ್‌ಹೆಚ್‌ಕ್ಯೂ/ತ1/ಜಿ.ರಾ.ಮು.ತ.ಶಿ.–02/2026–27/1438 **ದಿನಾಂಕ:03.11.2026.**

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ,
ಬಾಗಲಕೋಟೆ & ವಿಜಯಪುರ.

ಮಾನ್ಯರೆ,

ವಿಷಯ:– ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ **ಕಬ್ ಮಾಸ್ಟರ್ಸ್/ಸ್ಕೌಟ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್ /ಗೈಡ್ ಕ್ಯಾಪ್ಟನ್ಸ್‌ಗಳಿಗೆ ಆಯೋಜಿಸಿರುವ ಮೂಲ ತರಬೇತಿ** ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು.

******

ಮೇಲ್ಕಂಡಂತೆ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಕಬ್ ಮಾಸ್ಟರ್ಸ್ /ಸ್ಕೌಟ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಗೈಡ್ ಕ್ಯಾಪ್ಟನ್ಸ್‌ಗಳಿಗೆ ಮೂಲ ತರಬೇತಿ ಶಿಬಿರವನ್ನು ಆಯೋಜಿಸಿದ್ದು, ವಿವರಗಳು ಈ ಕೆಳಕಂಡಂತಿವೆ:

ತರಬೇತಿ	ಕಬ್ ಮಾಸ್ಟರ್ಸ್ /ಸ್ಕೌಟ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಗೈಡ್ ಕ್ಯಾಪ್ಟನ್ಸ್‌ಗಳಿಗೆ ಆಯೋಜಿಸಿರುವ ಮೂಲ ತರಬೇತಿ ಶಿಬಿರ.
ಸ್ಥಳ	**ವಾಸಂತಿಬಾಯಿ ಜಿಗಜಿನ್ನಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರ, ಬುರಣಾಪುರ, ವಿಜಯಪುರ ಜಿಲ್ಲೆ**
ದಿನಾಂಕ	**18.11.2026 ರಿಂದ 24.11.2026 ರವರೆಗೆ**
ಹಾಜರಾಗುವ ದಿನಾಂಕ	**18.11.2026ರ** ಬೆಳಗ್ಗೆ 10.00 ಗಂಟೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದು.
ಬಿಡುಗಡೆ ದಿನಾಂಕ	**24.11.2026ರ** ಸಂಜೆ 4.00 ಗಂಟೆಗೆ ಬಿಡುಗಡೆಗೊಳಿಸಲಾಗುವುದು.
ನೋಂದಣಿ ಶುಲ್ಕ	ಒಟ್ಟು ರೂ. 1200/– (ನೊಂದಾವಣಿ ಶುಲ್ಕ ರೂ. 150/– +ಊಟೋಪಚಾರದ ವೆಚ್ಚ ದಿನ ಒಂದಕ್ಕೆ ರೂ. 150/–ರಂತೆ 7 ದಿನಕ್ಕೆ ರೂ. 1050/–)
ದಳ ನೊಂದಾವಣಿ	ಫ್ಲಾಕ್ ಘಟಕಕ್ಕೆ ರೂ.98/– ಗೈಡ್ ಘಟಕಕ್ಕೆ ರೂ 242/–
ಭಾಗವಹಿಸುವ ಕಬ್ /ಸ್ಕೌಟ್/ಫ್ಲಾಕ್/ಗೈಡ್ ಶಿಕ್ಷಕ/ಶಿಕ್ಷಕಿಯರು ಈ ಲಿಂಕ್ ಮೂಲಕ ನೊಂದಾವಣಿ ಮಾಡಿಕೊಳ್ಳುವುದು.	https://zfrmz.in/P3kW0pzGv42LQKgawTx1
ಸ್ಕೌಟ್/ಗೈಡ್ (ಪುಸ್ತಕಗಳು) ಸಾಹಿತ್ಯ	ಅವಶ್ಯಕ ಪುಸ್ತಕಗಳನ್ನು ಶಿಬಿರ ಕೇಂದ್ರದಲ್ಲಿ ಖರೀದಿಸುವುದು.
ಯಾರು ಭಾಗವಹಿಸಬಹುದು	ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಹೊಸದಾಗಿ ಮೂಲ ತರಬೇತಿಯನ್ನು ಪಡೆಯಲಿಚ್ಛಿಸುವ **ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲಾ ಶಿಕ್ಷಕ ಶಿಕ್ಷಕಿಯರುಗಳನ್ನು** ನಿಯೋಜಿಸುವುದು.
ಸಮವಸ್ತ್ರ	ಸಮವಸ್ತ್ರಕ್ಕೆ ಅಂದಾಜು ರೂ.2000/– ಗಳಾಗಿದ್ದು, **ಶಿಬಿರ ಸ್ಥಳದಲ್ಲಿ ಸಮವಸ್ತ್ರವನ್ನು ಖರೀದಿಸಬಹುದು** ಅಥವಾ ತಾವು ತಮ್ಮ ಜಿಲ್ಲಾ ಸಂಸ್ಥೆಯ ಸಂಘಟಕರನ್ನು ಭೇಟಿ ಮಾಡಿ ಅವರ ಮಾರ್ಗದರ್ಶನದಲ್ಲಿಯೂ ಸಮವಸ್ತ್ರದ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ. ಪ್ರತಿಯೊಬ್ಬರಿಗೂ ಸಮವಸ್ತ್ರ ಕಡ್ಡಾಯವಾಗಿದೆ.
ಊಟ ಮತ್ತು ವಸತಿ	ಜಿಲ್ಲಾ ಸಂಸ್ಥೆಯ ವತಿಯಿಂದ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗುವುದು.

ತರಬೇಕಾದ ವಸ್ತುಗಳು	ಸಂಪೂರ್ಣ ಸಮವಸ್ತ್ರ, ಬದಲಾಯಿಸುವ ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, 200 ಪೇಜ್‌ನ ನೋಟ್ ಪುಸ್ತಕ, ಡ್ರಾಯಿಂಗ್ ಶೀಟ್, ಸೂಜಿದಾರ, ಸ್ಕೆಚ್ ಪೆನ್ಸ್, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿ ಹಗ್ಗ, ಛತ್ರಿ, ಟಾರ್ಚ್, ಮಸ್ಕಿಟೋ ಕಾಯಿಲ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ.
ನೊಂದಾಯಿಸಲು ಕಡೆ ದಿನಾಂಕ	ತಮ್ಮ ಜಿಲ್ಲಾ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ **ಡಿ.ಟಿ.ಸಿ/ಎಎಸ್‌ಒಸಿ/ಎಸ್.ಜಿ.ಎ**ರವರು ಕೂಡಲೇ ಆನ್‌ಲೈನ್‌ನಲ್ಲಿ ನೊಂದಾಯಿಸಲು ಕ್ರಮ ಕೈಗೊಳ್ಳುವುದು. **ಕಡೆಯ ದಿನಾಂಕ 13.11.2026**
ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ	ಶ್ರೀ ಪರಶುರಾಮ್ ಕುಂಬಾರ್, ಜಿಲ್ಲಾ ಕಾರ್ಯದರ್ಶಿ, ವಿಜಯಪುರ– 9449009605 ಶ್ರೀ ಡಿ.ಬಿ. ಅತ್ತಾರ್, ಎ.ಎಸ್.ಒ.ಸಿ, ವಿಜಯಪುರ– 8197440796 ಶ್ರೀ ಎಸ್.ಎಸ್. ದಳವಾಯಿ, ಜಿಲ್ಲಾ ಕಾರ್ಯದರ್ಶಿ, ಬಾಗಲಕೋಟೆ– 9902004145 ಶ್ರೀ ಸಂಜಯ್, ಎಸ್.ಜಿ.ಎ, ಬಾಗಲಕೋಟೆ– 9880294917 ರಾಜ್ಯ ಕೇಂದ್ರ ಕಛೇರಿ ದೂರವಾಣಿ ಸಂಖ್ಯೆ: 080–22267470 ಶ್ರೀಮತಿ. ಕೆ.ವಿ. ಶಾಮಲ, ರಾ.ತ.ಆ(ಗೈ) – 9482614116 ಶ್ರೀ. ನಾಗೇಶ್ ಆರ್. ಶಿವಪುರ್, ರಾ.ತ.ಆ(ಸ್ಕೌ) – 9731854272

ಮೂಲ ತರಬೇತಿಯನ್ನು ಪಡೆಯಲು ಆಸಕ್ತಿ ಹೊಂದಿದ ತಮ್ಮ ಜಿಲ್ಲೆಯ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಂದ ಶಿಕ್ಷಕ–ಶಿಕ್ಷಕಿಯರುಗಳನ್ನು ನಿಯೋಜಿಸುವಲ್ಲಿ ತಮ್ಮ ಜಿಲ್ಲೆಯ, ಜಿಲ್ಲಾ ತರಬೇತಿ ಆಯುಕ್ತರುಗಳು ಮತ್ತು ಸಂಘಟಕರುಗಳು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಸ್ಕೌಟ್–ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಮಾಹಿತಿ ಹಾಗು ಮುಂದಿನ ಕ್ರಮಕ್ಕಾಗಿ:–

1. ಮಾನ್ಯ ರಾಜ್ಯ ಆಯುಕ್ತರು(ಸ್ಕೌಟ್ಸ್)(ಗೈಡ್ಸ್)(ವ.ಸಂ), ಭಾ.ಸ್ಕೌ & ಗೈ, ಕರ್ನಾಟಕ
2. ಸಂಬಂಧಪಟ್ಟ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ & ಗೈ), ಭಾ.ಸ್ಕೌ & ಗೈ, ಕರ್ನಾಟಕ
3. ಸಂಬಂಧಪಟ್ಟ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/ಎಸ್.ಜಿ.ಎರವರಿಗೆ
4. ಲೆಕ್ಕ ಪತ್ರ ವಿಭಾಗ.
5. ಕಛೇರಿ ಪ್ರತಿ